# ಸಂಘಟಿತ ಸ್ವರೂಪದ ಪ್ರತಿರೋಧ ಅಗತ್ಯ



ಈಶ್ವರ ಬಡಿಗೇರ

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ವ್ಯವಸ್ಥೆಯ ಸಕಲ ಅಂಗಗಳೂ ಒಂದಲ್ಲಾ ಒಂದು ರೀತಿಯಲ್ಲಿ ಹವಣಿಸುತ್ತಿರುತ್ತವೆ; ಅದನ್ನು ಎದುರಿಸುವುದು ಬರಹಗಾರನ ಮಣಿಯದಿಹ ಮನವೊಂದೇ. ಕೆಲವೊಮ್ಮೆ ಅಂಥ ಮನವನ್ನೂ ಸುಮ್ಮನಿರಿಸುವಷ್ಟು ವ್ಯವಸ್ಥೆಯ ಕೈಮೇಲಾಗುತ್ತದೆ; ಆಗ ಅದನ್ನು ವಿರೋಧಿಸಿ ಬೆಂಬಲಕ್ಕೆ ನಿಲ್ಲಬೇಕಾದುದು ಅಂಥ ಸಮಾನ ಮನಗಳು ಮಾತ್ರವೇ.

ತಮಿಳು ಬರಹಗಾರ ಪೆರುಮಾಳ್ ಮುರುಗನ್ ಅವರ ಕಾದಂಬರಿ 'ಮಾದೊರುಬಾಗನ್' ಇಂಗ್ಲಿಷ್‌ಗೆ ಭಾಷಾಂತರಗೊಂಡ ನಂತರ ಹಲವು ದುಷ್ಟ ಉದ್ದೇಶಗಳಿಗೆ ಗುರಿಯಾಗಿದೆ. ಜಾತ್ಯಂಧತೆ, ಧರ್ಮಾಂಧತೆ, ಮೂಢನಂಬಿಕೆ ಮತ್ತು ಮುಖ್ಯವಾಗಿ ಅವುಗಳನ್ನು ಬಳಸಿಕೊಳ್ಳುವ ಕೆಟ್ಟ ರಾಜಕಾರಣ ಎಲ್ಲವೂ ಈ ಲೇಖಕನ ಮೇಲೆರಗಿವೆ. ಆದರೆ ಸ್ಥಳೀಯ ಆಡಳಿತ, ಲೇಖಕನ ಸ್ವಾತಂತ್ರ್ಯವನ್ನು ರಕ್ಷಿಸುವುದು ಬಿಟ್ಟು ಅಧಮ ಶಕ್ತಿಗಳ ಜೊತೆಗೆ ಸೇರಿಕೊಂಡಿದೆ. ಲೇಖಕ ಅವರ ಮುಂದೆ ನಿಂತು 'ತಪ್ಪು' ಒಪ್ಪಿಕೊಳ್ಳುವಂತೆ ಒತ್ತಾಯಿಸುವ ಹೇಯ ತಪ್ಪು ಮಾಡಿದೆ. ಈ ಸರ್ವಥಾ ಖಂಡನೀಯ ಕ್ರಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎರಗಿದ ಸಿಡಿಲು ಎಂದೇ ಪರಿಗಣಿಸಬೇಕು.

ಅಕ್ಷರ ಲೋಕದಲ್ಲಿ ಪೆರುಮಾಳ್ ಮುರುಗನ್ ಅವರ ಪರವಾಗಿ ಸಾಕಷ್ಟು ದನಿ ಏಳುತ್ತಿದೆ. ಚೆನ್ನೈ, ಜೈಪುರ, ಬೆಂಗಳೂರು ಮುಂತಾದ ಕಡೆ ನಡೆದ ಪ್ರಮುಖ ಸಾಹಿತ್ಯ ಸಮಾವೇಶಗಳಲ್ಲಿ ಈ ಕುಕೃತ್ಯಕ್ಕೆ ವಿರೋಧ ಮತ್ತು ಬರಹಗಾರನಿಗೆ ಬೆಂಬಲ ವ್ಯಕ್ತವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ದಮನಕ್ಕೆ ನಡೆಯುವ ಎಲ್ಲ ಯತ್ನಗಳಿಗೆ ಪ್ರತಿರೋಧ ಇನ್ನಷ್ಟು ಸಂಘಟಿತ ಸ್ವರೂಪದಲ್ಲಿ ಬೆಳೆಯಬೇಕಾದ ಅಗತ್ಯವಿದೆ. ಮೂಲಭೂತವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳು ತಮ್ಮ ಮೊದಲ ಶತ್ರುವಿನ ಮೇಲೆ ಹದ್ದಿನ ಕಣ್ಣು ಇಟ್ಟೇ ಇರುತ್ತಾರೆ.

ಬರಹಗಾರರ ಸ್ವಾತಂತ್ರ್ಯವನ್ನು ಸದಾ ಗೌರವಿಸುವ 'ಮಯೂರ' ಈ ಸಂಚಿಕೆಯಲ್ಲಿ ಪೆರುಮಾಳ್ ಮುರುಗನ್ ಅವರ 'ಮಾದೊರುಬಾಗನ್' ಕಾದಂಬರಿಯ ಕೆಲವು ಪುಟಗಳ ಕನ್ನಡ ಅನುವಾದವನ್ನು ಪ್ರಸ್ತುತಪಡಿಸುತ್ತಿದೆ. ಇದು ಪೆರುಮಾಳ್ ಮುರುಗನ್ ಅವರಿಗೆ ಕನ್ನಡ ಸಾಹಿತ್ಯ ಲೋಕದ ಬೆಂಬಲದ ಸಂಕೇತ ಎಂದು ಭಾವಿಸುತ್ತದೆ.

**–ಆರ್. ಪೂರ್ಣಿಮಾ**